# 1.. ಸ.ಹಿ.ಪ್ರಾ. ಶಾಲೆ, ಚಿಟ್ಟೂರು, ಸೊರಬ ತಾ



ಸ.ಹಿ.ಪ್ರಾ. ಶಾಲೆ, ಚಿಟ್ಟೂರು, ಸೊರಬ ತಾಲ್ಲೂಕು – ಈ ಶಾಲೆಯು 1932ರಲ್ಲಿ ಸ್ಥಾಪನೆಯಾಯಿತು. ಆರಂಭದಲ್ಲಿ 5 ಕೊಠಡಿಗಳಿದ್ದವು. ನಂತರದಲ್ಲಿ ಮತ್ತೊಂದು ಕೊಠಡಿ ನಿರ್ಮಾಣವಾಯಿತು. ಹಂತ ಹಂತವಾಗಿ ಶಾಲೆಯು ಅಭಿವೃದ್ಧಿ ಹೊಂದುತ್ತಸಾಗಿತು. ಆರಂಭದಲ್ಲಿ 400ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು. 2003ರಲ್ಲಿ ಬಿಸಿಯೂಟ ಯೋಜನೆ ಪ್ರಾರಂಭವಾಯಿತು. 2008–09ರಲ್ಲಿ ಸಂಯುಕ್ತ ಪ್ರೌಢಶಾಲೆಯಾಗಿ ಮಾರ್ಪಾಡಾಯಿತು.

ನಂತರದಲ್ಲಿ ಪುನಃ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳಾಗಿ ವಿಭಾಗಗಳಾದವು. 2005ರ ಆಸುಪಾಸಿನಲ್ಲಿ ಶಾಲಾ ಕಾಂಪೌಂಡ್ ಮತ್ತು ಶೌಚಾಲಯಗಳು ನಿರ್ಮಾಣಗೊಂಡವು. 2009–10ನೇ ಸಾಲಿನಲ್ಲಿ ಖೋ–ಖೋ ಕ್ರೀಡೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಪ್ರತಿ ವರ್ಷವು ಸಹ ಖೋ–ಖೋ ಕ್ರೀಡೆಯಲ್ಲಿ ಪ್ರಶಸ್ತಿ ಪಡೆದು ಉತ್ತಮ ಸಾಧನೆ ಮಾಡುತ್ತಿದ್ದಾರೆ.

ಬಾಲಕ ಮತ್ತು ಬಾಲಕಿಯರ ಪ್ರತ್ಯೇಕ ಶೌಚಾಲಯಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಯಿತು. 2008–09ರಲ್ಲಿ ದಾಸ್ತಾನು ಕೊಠಡಿ ನಿರ್ಮಿಸಲಾಯಿತು. ಮುಖ್ಯ ಶಿಕ್ಷಕರ ಕೊಠಡಿ ನಿರ್ಮಿಸಲಾಗಿದೆ. ಪ್ರಸ್ತುತ 6 ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು 135 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 3 ಜನ ಅಡುಗೆ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಕೊಠಡಿಗಳ ಮೇಲ್ಛಾವಣೆ ದುರಸ್ತಿ ಕಾರ್ಯವನ್ನು ಗ್ರಾಮ ಪಂಚಾಯಿತಿ ಸಹಕಾರದೊಂದಿಗೆ ನಿರ್ಮಿಸಲಾಯಿತು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಮತ್ತು ಎಸ್.ಡಿ.ಎಂ.ಸಿ. ಸಹಕಾರದೊಂದಿಗೆ ಶಾಲೆಯು ಅಭಿವೃದ್ಧಿಯತ್ತ ಸಾಗುತ್ತಿದೆ.

**1. ಶಾಲಾ ಪರಿಸರ:**

ಸ್ವಚ್ಛ ಸುಂದರ ಪರಿಸರ ಮಕ್ಕಳನ್ನು ಆಕರ್ಷಿಸಿ ಶಾಲೆಗೆ ಕೈ ಬೀಸಿ ಕರೆಯುವಂತಿದೆ. ಪ್ಲಾಸ್ಟಿಕ್‌ಮುಕ್ತ ಪರಿಸರ ಸುಂದರವಾಗಿದ್ದು ಮನಸ್ಸಿಗೆ ಮುದ ನೀಡುವಂತಿದೆ.

**2. ದಾಖಲಾತಿ ಆಂದೋಲನ**



ದಾಖಲಾತಿ ಆಂದೋಲನದಡಿಯಲ್ಲಿ ಮಕ್ಕಳು ಜಾಥಾ ಹೋಗುವುದರ ಮೂಲಕ ದಾಖಲಾತಿ ಹೆಚ್ಚಿಸಲಾಗಿದೆ.

3. **ಪರಿಸರ ದಿನಾಚರಣೆ**

ಗ್ರಾಮ ಪಂಚಾಯಿತಿ ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಪರಿಸರ ದಿನಾಚರಣೆ ಆಚರಿಸಲಾಯಿತು.




4. **ಯೋಗ ದಿನಾಚರಣೆ**



ಯೋಗ ದಿನಾಚರಣೆಯ ದಿನ ವಿವಿಧ ಯೋಗಗಳನ್ನು ಪ್ರದರ್ಶನ ಮತ್ತು ಅಭ್ಯಾಸ ಮಾಡಿಸಲಾಯಿತು. ಯೋಗದ ಮಹತ್ವವನ್ನು ಮಕ್ಕಳಿಗೆ ತಿಳಿಸಲಾಯಿತು.



5. **ಪೋಷಕರ ಸಹಾಯದೊಂದಿಗೆ 2ನೇ ಸಮವಸ್ತ್ರ ವಿತರಣೆ**

## 6. ಕ್ರೀಡಾಕೂಟ

ಶಾಲೆಯ ಮಕ್ಕಳು ಆಸಕ್ತಿಯಿಂದ ಭಾಗವಹಿಸಿ ವೈಯಕ್ತಿಕ ಮತ್ತು ಗುಂಪು ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ. ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ.




## 7. ಪ್ರತಿಭಾ ಕಾರಂಜಿ




ನಮ್ಮ ಶಾಲೆಯ ಮಕ್ಕಳು ರಸಪ್ರಶ್ನೆ, ಜಾನಪದ ನೃತ್ಯ, ಕೋಲಾಟ, ಆಶುಭಾಷಣ, ಕಂಠಪಾಠ ಸ್ವರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದು ತಲ್ಲೂಕು ಮಟ್ಟದಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ. ಶಾಲೆಗೆ ಕೀರ್ತಿ ತಂದಿದ್ದಾರೆ.

## 8. ಸ್ವಚ್ಛತಾ ಆಂದೋಲನ

ಎಸ್.ಡಿ.ಎಂ.ಸಿ. ಮತ್ತು ಗ್ರಾಮ ಪಂಚಾಯಿತಿಯ ಸಹಯೋಗದೊಂದಿಗೆ ಶಾಲೆಯ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಲಾಯಿತು. ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.





## 9. ತಟ್ಟೆ ಸ್ಟ್ಯಾಂಡ್

ಧರ್ಮಸ್ಥಳ ಸಂಘದ ವತಿಯಿಂದ ಶಾಲೆಗೆ ತಟ್ಟೆ ಸ್ಟ್ಯಾಂಡ್‌ನ್ನು ಕೊಡುಗೆ ನೀಡಲಾಗಿದೆ. ಊಟದ ತಟ್ಟೆಗಳನ್ನು ಇಡಲು ಇದು ಅನುಕೂಲವಾಗಿದೆ.

**10. ಸಾವಯವ ಕೃಷಿ ಮಾಹಿತಿ**



ಊರಿನ ಗ್ರಾಮಸ್ಥರು, ಶಿಕ್ಷಕರು ಸೇರಿ ಸಾವಯವ ಗೊಬ್ಬರದ ತಯಾರಿಕೆ, ಬಳಕೆ, ಕುರಿತು ಮಕ್ಕಳಿಗೆ ತಿಳಿಸಲಾಯಿತು. ಸಾವಯವ ಗೊಬ್ಬರದ ಉಪಯೋಗಗಳನ್ನು ತಿಳಿಸಲಾಯಿತು. ಶಾಲಾ ಆವರಣದಲ್ಲಿ ಸಾವಯವ ಗೊಬ್ಬರದ ಗುಂಡಿಯನ್ನು ತೆಗೆಸಿ ಗೊಬ್ಬರದ ತಯಾರಿಕೆಯನ್ನು ಮಾಡಲಾಗುತ್ತಿದೆ.

**11. ಭತ್ತ ನಾಟಿಯ ಪ್ರಾತ್ಯಕ್ಷತೆ**

ಮಕ್ಕಳನ್ನು ಗದ್ದೆಗೆ ಕರೆದುಕೊಂಡು ಹೋಗಿ ಭತ್ತದ ನಾಟಿಯ ವಿಧಾನ ಮತ್ತು ಬೆಳೆಯ ಬಗ್ಗೆ, ಬೆಳವಣಿಗೆಯ ವಿವಿಧ ಹಂತಗಳು ಮತ್ತು ಕಾರ್ಯಗಳ ಬಗ್ಗೆ ತಿಳಿಸಲಾಯಿತು.






**12. ಪರಿಸರ ಮಿತ್ರ ಶಾಲಾ ಪ್ರಶಸ್ತಿ**

ನಮ್ಮ ಶಾಲೆಯು 2018–19ನೇ ವರ್ಷದಲ್ಲಿ ಪರಿಸರಮಿತ್ರ ಶಾಲಾ ಪ್ರಶಸ್ತಿಯನ್ನು ಪಡೆದಿದೆ. ಇದು ಹೆಮ್ಮೆಯ ವಿಷಯವಾಗಿದೆ.

**13. ಧನ್ವಂತರಿ ವನ**






ಶಾಲೆಯ ಆವರಣದಲ್ಲಿ ಧನ್ವಂತರಿ ವನವನ್ನು ನಿರ್ಮಿಸಲಾಗಿದೆ. ಈ ವನದಲ್ಲಿ 30ಕ್ಕೂ ಹೆಚ್ಚು ಔಷಧ ಸಸ್ಯಗಳನ್ನು ಬೆಳೆಸಲಾಗಿದೆ. ಇದರ ಜೊತೆಗೆ ಮಕ್ಕಳಿಗೆ ಪ್ರತಿದಿನ ಒಂದೆಲಗ ಮತ್ತು ತುಳಸಿ ಎಲೆ ಗಳನ್ನು ನೀಡಲಾಗುತ್ತಿದೆ. ಮಕ್ಕಳು ಔಷಧಿ ಸಸ್ಯಗಳ ಹೆಸರು ಮತ್ತು ಉಪ ಯೋಗದ ಬಗ್ಗೆ ತಿಳಿದಿದ್ದಾರೆ.

**14. ನಲಿ–ಕಲಿ ಉತ್ತಮ ಶಾಲಾ ಪ್ರಶಸ್ತಿ**

2018–19ನೇ ಸಾಲಿನ ಉತ್ತಮ ನಲಿ–ಕಲಿ ಪ್ರಶಸ್ತಿಗೆ ನಮ್ಮ ಶಾಲೆಯು ಆಯ್ಕೆಯಾಯಿತು. ನಲಿ–ಕಲಿ ಮಕ್ಕಳು ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ ಉತ್ತಮವಾಗಿ ಕಲಿಯುತ್ತಿದ್ದಾರೆ.







15. **ಶಾಲಾ ಶೈಕ್ಷಣಿಕ ಪ್ರವಾಸ**

ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದರ ಮೂಲಕ ಮಂಡ್ಯ, ಶ್ರೀರಂಗಪಟ್ಟಣ, ಮೈಸೂರು ಇನ್ನೂ ಮುಂತಾದ ಐತಿಹಾಸಿಕ ಸ್ಥಳಗಳ ಪರಿಚಯ ಮಾಡಿಸಲಾಯಿತು. ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಪರಿಚಯಿಸಲಾತ್ತಿದೆ.



# ಜಾನಪದಕ್ಕೆ ಜಾಗತೀಕರಣ ಶಾಪ: ಡಾ.ಬಾಲಾಜಿ

■ ವಿಕ ಸುದ್ದಿಲೋಕ ಸೊರಬ

ಜಾನಪದವನ್ನು ಜೀವನ ಕ್ರಮದಲ್ಲಿ ಹಾಗೂ ಶಾಲಾ-ಕಾಲೇಜು ಪಠ್ಯಕ್ರಮದಲ್ಲಿ ಅಳವಡಿಸುವ ಮೂಲಕ ಉಳಿಸಿಕೊಳ್ಳಬಹುದು ಎಂದು ಕನ್ನಡ ಜಾನಪದ ಪರಿಷತ್ ರಾಜ್ಯ ಕಾರ್ಯಾಧ್ಯಕ್ಷ ಡಾ. ಎಸ್. ಬಾಲಾಜಿ ಅಭಿಪ್ರಾಯಪಟ್ಟರು.

ತಾಲೂಕಿನ ಚಿಟ್ಟೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಹಮ್ಮಿಕೊಂಡ 'ವಿಕಾಸಕ್ಕಾಗಿ ಜಾನಪದ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಾನಪದಕ್ಕೆ ಆಧುನಿಕರಣ-ಜಾಗತೀಕರಣ ಶಾಪವಾಗಿದ್ದು, ಜನಪದ ಕಲಾವಿದರನ್ನು ಪ್ರೋತ್ಸಾಹಿಸಬೇಕು ಹಾಗೂ ಸಂಸ್ಕೃತಿಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ. ಪ್ರತ್ಯೇಕ ಜಾನಪದ ಅಕಾಡೆಮಿ ರಚಿಸುವ ಮೂಲಕ ನಾಡಿನ ಅನನ್ಯತೆಯಾಗಿರುವ ಜಾನಪದವನ್ನು ನಶಿಸದಂತೆ ಕಾಪಾಡಬೇಕು ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಾಮಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಕರಾದ ಗಂಗಾಧರ್ ನಾಯ್ಕ್ ಸ್ವಾಗತಿಸಿ, ಸಾವಿತ್ರಮ್ಮ ವಂದಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ರಾಜು, ಶಾಲಾ ಸಮಿತಿ ಸದಸ್ಯ ಪಾಲಾಕ್ಷಪ್ಪ, ವೆಂಕಟೇಶ್, ಅನಿಲ್, ಮುಖ್ಯ ಶಿಕ್ಷಕಿ ರುಕ್ಮಿಣಿ, ಶಿಕ್ಷಕಿಯರಾದ ರೂಪ ನೇಕಾರ, ವೀಣಾ ಮತ್ತಿತರರು ಹಾಜರಿದ್ದರು.

ಸೊರಬ ತಾಲೂಕು ಚಿಟ್ಟೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ವಿಕಾಸಕ್ಕಾಗಿ ಜಾನಪದ ಕಾರ್ಯಕ್ರಮ ನಡೆಯಿತು.

**16. ವಿಕಾಸಕ್ಕಾಗಿ ಜಾನಪದ ಕಾರ್ಯಕ್ರಮ**

ಈ ಶಾಲೆಯ ಹಿರಿಯ ವಿದ್ಯಾರ್ಥಿಯಾದ ಅನಿಲ್ ನೇತೃತ್ವದಲ್ಲಿ ಹಾಗೂ ಕನ್ನಡ ಜಾನಪದ ಪರಿಷತ್ ರಾಜ್ಯ ಕಾರ್ಯಧ್ಯಕ್ಷ ಡಾ॥ ಎಸ್.ಬಾಲಾಜಿಯವರ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಹಾಗೂ ಜನರಿಗೆ ಜಾನಪದದ ಜಾಗೃತಿ ಮೂಡಿಸಲಾಯಿತು.

**17. ಪೋಷಕರ ಆಟ**



ಶಾಲೆ ಮತ್ತು ಸಮುದಾಯದ ಬಾಂಧವ್ಯವನ್ನು ಉತ್ತಮಪಡಿಸುವುದಕ್ಕೆ ಪೋಷಕರಿಗೆ ವಿವಿಧ ರೀತಿಯ ಮನೋರಂಜನಾ ಆಟಗಳನ್ನು ಏರ್ಪಡಿಸಲಾಗುತ್ತಿದೆ.



**18. ಶಾಲಾ ವಾರ್ಷಿಕೋತ್ಸವ**

ಪಠ್ಯ ವಿಷಯಅಲ್ಲದೆ ಪಠ್ಯೇತರ ವಿಷಯಗಳಲ್ಲಿ ಮಕ್ಕಳಿಗೆ ಆಸಕ್ತಿ ಮೂಡಿಸಲು ವಿವಿಧ ರೀತಿಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿ ಶಾಲಾ–ವಾರ್ಷಿಕೋತ್ಸವವನ್ನು ಪ್ರತಿ ವರ್ಷ ಆಚರಿಸಲಾಗುತ್ತಿದೆ.

**19. ವಿಜ್ಞಾನ ವಸ್ತು ಪ್ರದರ್ಶನ**





ಪ್ರತಿ ವರ್ಷ ಫೆಬ್ರವರಿ 28 ರಂದು ವಿಜ್ಞಾನ ದಿನಾ ಚರಣೆಯ ಪ್ರಯುಕ್ತ ವಿಜ್ಞಾನ ವಸ್ತು ಪ್ರದರ್ಶನ ವನ್ನು ಯೋಜಿಸಲಾಗುತ್ತದೆ. ಮಕ್ಕಳು ಆಸಕ್ತಿಯಿಂದ ಪ್ರಯೋಗ ಗಳನ್ನು ಮಾಡುವುದರ ಮೂಲಕ ವೈಜ್ಞಾನಿಕ ಮನೋಭಾವವನ್ನು ಬೆಳಸಲು ಪ್ರೋತ್ಸಾಹಿಸಲಾಗುತ್ತಿದೆ. ಮಕ್ಕಳೇ ಸ್ವತಃ ವಿಜ್ಞಾನ ಮಾದರಿಗಳನ್ನು ಮಾಡುವುದರ ಮೂಲಕ ಪ್ರದರ್ಶನದಲ್ಲಿ ಭಾಗವಹಿಸಿದ್ದರು.